433

19-6-76

ಮೈಸೂರ ಗಿಜಿಟ್.

ನಂ. 24 ಸರ್ಕಾರದಿಂದ ಛಾಯಿಷ್ ಆದ್ದು. ಸನ 1876.

ಬೆಂಗಳೂರು, ಶನಿವಾರ, ಜೂನ್ ತಾ॥ 17, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 91—94

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಾಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಕಾಲೆ ಡೈರೆಕ್ಟರು, ಫಾರೆಸ್ಟ್ ಕನ್‌ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನಲ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. .. 281—292

3ನೇ ಭಾಗ—ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. .. ..

ಸಪ್ಲಿಮೆಂಟ್—ಖಿಲಾಸೇಯಾದ ಖೈದಿಗಳ ಜಹರೇ ಪಟ್ಟಿ. .. .. 73—84

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 85. ತಾರೀಖು 8ನೇ ಜೂನ್ 1876.

ಇಂಫೀರಿಯರ್ ಸರ್‌ವಿಸ್ (ಯಾನೆ ಸಾಧಾರಣ ನೌಕರೀ ಬಾಬತು) ಪೊಲೀಸ್ ಫೂಜಿನ ರಜಾರೂಲ್ಸ್.

ಸಿವಿಲ್ ಲೀವ್ ಕೋಡ್, F ಸಪ್ಲಿಮೆಂಟಿನ 1ನೇ (b) ಸೆಕ್ಷನ್ ವಿಷಯದಲ್ಲಿ, ಮೂಹೆಯಾನಾ 20 ರೂಪಾಯಿಗಿಂತ ಕಮ್ಮಿಯಾದ ತಲಬ್‌ಉಳ್ಳ ಪೊಲೀಸ್ ಫೂಜಿನ ಜನಗಳಿಗೆ ರಜಾ ಕೊಡುವ ಅಂಶಕ್ಕೆ ಸಂಬಂಧಿಸಿದ ಈ ಕೆಳಗೆ ಬರುವ ರೂಲ್ಸ್ ಛಾಯಿಷ್ ಮಾಡಲ್ಪಟ್ಟಿರುತ್ತೆ.

ಪ್ರಿವಿಲೀಜ್ ರಜಾ.

2. ಪ್ರತಿ ಸಂವತ್ಸರ 10 ದಿನಗಳಿಗೆ, ಅಥವಾ ಮೂರು ವರುಷ ಕ್ಕೊಂದಾವರ್ತಿ ಒಂದು ತಿಂಗಳ ಮಟ್ಟಿಗೆ ಜವಾಯಿಸಿ ಕ್ಕೊಳ್ಳುವಂತೆ ಪೂರಾ ತಲಬ್ ನಿೀ ಪ್ರಿವಿಲೀಜ್ ರಜಾ ಕೊಡಲ್ಪಡ ಬಹುದು.

ಪ್ರಿವಿಲೀಜ್ ರಜಾಕ್ಕೆ ಯಾವ ಜಾಸ್ತೀ ರಜಾ ಆಗಲಿ ಪ್ರಿವಿಲೀಜ್ ರಜಾ ಕಳಕೊಂಡು ಸ್ವಂತ ಕೆಲಸದ ಮೇಲಿನ ರಜಾ ತರೀಕ್ ಯಣಿಸಲ್ಪಡ ತಕ್ಕದ್ದು.

ಸ್ವಂತಕೆಲಸದ ಮೇಲೆ ರಜಾ.

3. ಪ್ರತಿ ಸಂವತ್ಸರದಲ್ಲೂ, ಒಂದು ತಿಂಗಳ ಮೆಟ್ಟಿಗೂ ಮೂರು ಸಂವತ್ಸರ ಕ್ಕೊಂದು ಸಲ ಮೂರು ತಿಂಗಳಿಗೆ ಜವಾಯಿಸಿಯೂ, ಸ್ವಂತ ಕೆಲಸದ ಮೇಲೆ ಬ ಗರ್ ತಲಬ್ ರಜಾ ಕೊಡಲ್ಪಡ ಬಹುದು.

ಕಾಯಂ ನೌಕರನು ಗೈರ್ ಹಾಜರಿದ್ದು ತಲಬ್ ತೆಗದು ಕೊಳ್ಳದೇ ಇರುವಲ್ಲಿ ಬದಲೀಯ ಪೂರಾ ತಲಬ್ ನಿೀ ಮೊಕರರ್ ಮಾಡಲ್ಪಡ ಬಹುದು.

ಮೆಡಿಕೆಲ್ ಸರ್ಟಿಫಿಕೇಟಿನ ಮೇಲೆ ರಜಾ.

4. F ಸಪ್ಲಿಮೆಂಟ್ 1ನೇ ಸೆಕ್ಷನ್ನಿನ (1) ನೇ ವಿನಾಯತೀ ಪ್ರಕಾರ ಯಾವ ಪೊಲೀಸ್ ಆಫಿಸರನ್ನಾಗಲಿ ಆಸ್ಪಿಟಲ್ ನೊಳಗೆ ಅಥವಾ ಯಾವ ಸ್ಟೇಷನ್ನಲ್ಲಿ ಇರುವ ಆಸ್ಪತ್ರಿಯ ಔಟ್‌ಡೋರ್ ಪೇಷಿಯಂಟ್ ಯಾನೆ ಆಸ್ಪತ್ರಿಯಲ್ಲಿದ್ದು ಚಿಕಿತ್ಸೆಯನ್ನು ಪಡೆಯದೆ ಔಷದ ಮಾತ್ರ ತೆಗದು ಕೊಂಡು ಹೋಗತಕ್ಕ ಕಾಹಿಲೇ ಜನಗಳಿಗೆ ಮೂರು ವರುಷಗಳ ಯಾವ ವಾಯಿದೆ ಯಲ್ಲಾಗಲಿ ಕುಲ್ ಆರು ತಿಂಗಳಿಗೆ ಜಾಸ್ತೀ ಇಲ್ಲದ ಬಂದು ಕಾಲದ ಪರ್ಯಂತ ನಿಸ್ಪ್ ತಲಬ್ ಕೊಡಲ್ಪಡುವದು. ಅಂಥಾ ರಜಾ ಬಂದೇ ಕಾಲದಲ್ಲಿ ತೆಗದು ಕ್ಕೊಳ್ಳಲ್ಪಡಲಿ ಖಂಡ ಖಂಡವಾಗಿ ತೆಗದುಕೊಳ್ಳಲ್ಪಡಲಿ ಚಿಂತೆಯಿಲ್ಲ.

ಸಿಕ್ ರಜಾದ ಮೇಲೆ ಕಾಯಂ ಉದ್ಯೋಗಸ್ಥ ಗೈರ್ ಹಾಜರಿದ್ದಾಗ, ಮಾಹೆ ಯಾನಾ 5 ರೂಪಾಯಿಗಳ ಬದಲೀ ಯಿಸಂ ಮೊಕರರ್ ಮಾಡಲ್ಪಡಬಹುದು.

5. ಈ ರೂಲ್ಸ ಅನುಸರಿಸಿ ರಜಾ ಕೊಡುವ ಅಧಿಕಾರವು ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮ್ಮಿಷನರವರಿಗೆ ಕೊಡಲ್ಪಟ್ಟಿರುತ್ತೆ.

ನಂ. 87. ತಾರೀಖು 9ನೇ ಜೂ೯ 1876.

ಫಾರೆಸ್ಟ್ ಅಸಿಸ್ಟೆಂಟ್ ಕ೯ ಸರ್ವೇಟರ್ ಮೆಸ್ಟರ್ ಲಡ್ಲೊ ಸಾಹೆಬರು ನಂದೀದುರ್ಗ ಫಾರೆಸ್ಟ್ ಡಿವೀಜ೯ ಚಾರ್ಜನ್ನು ಮೆಸ್ಟರ್ ಡ್ಯಾಲಿ ಸಾಹೆಬರಿಗೆ 1876ನೇ ಇಸವಿ ಮೇ ತಾರೀಖು 30ರಲ್ಲು ಕೊಟ್ಟರು.

ನಂ. 88. ತಾರೀಖು 12ನೇ ಜೂ೯ 1876.

ಮೈಸೂರಲ್ಲಿರುವ ಮಹಾರಾಜರವರ ಹೈಸ್ಕೂಲ್ ಹೆಡ್ ಮ್ಯಾಸ್ಟರ್ ಕ್ಯಾಂಡಿ B., A. ಯವರು ತಮ್ಮ ಉದ್ಯೋಗದ ಚಾರ್ಜನ್ನು 1876ನೇ ಇಸವಿ ಜೂ೯ ಗುರ್ವೇ ತಾರೀಖು ಮಧ್ಯಾನ್ನಕ್ಕೆ ಪೂರ್ವ ವಹಿಸಿದರು.

ನಂ. 89. ತಾರೀಖು 14ನೇ ಜೂ೯ 1876.

ಈ ಕೆಳಗೆ ಕಂಡ ವರ್ಗಾವರ್ಗಿೀಗಳು ಮಂಜೂರಾಗಿವೆ.

ಮೆಸ್ಟರ್ ಲೇಸಿ, ಬಿ. ಎಲ್., ಜುಡಿಷಲ್ ಅಸಿಸ್ಟೆಂಟ್ ಕಮ್ಮಿಷನರ್ ಮೈಸೂರಿಂದ ಬೆಂಗಳೂರಿಗೆ.

1876ನೇ ಇಸವಿ ಜೂ೯ 19ನೇ ಮುಕ್ತಂನಲ್ಲಿ ಬೆಂಗಳೂರು ವ ಕೋಲಾರ ಜುಡಿಷಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟುಗಳು ಮರಳಿ ನಿಷ್ಠಿಸ್ತಾಗುವದರಿಂದ ಅವುಗಳ ಚಾರ್ಜನ್ನು ಮೆಸ್ಟರ್ ಲೇಸೀಯವರು ಹೋಗಿ ಸದರೀ ತಾರೀಖಿನಲ್ಲಿ ವಹಿಸ ತಕ್ಕದ್ದು.

ನಂ. 90. ತಾರೀಖು 14ನೇ ಜೂ೯ 1876.

ಬೇತಮಂಗಲ ತಾಲ್ಲೂಕು ಅಮಲ್ದಾರ್ ಮುರಗೇಶಮೊದಲ್ಯಾರ್ರು ರೇಲ್ವೆ ಆಕ್ಟ್ಗಳಾದ 1854ನೇ ಇಸವಿ 18ನೇ ನಂಬರ್ ಆಕ್ಟ್ ಮತ್ತು 1871ನೇ ಇಸವಿ 25ನೇ ನಂಬರ್ ಆಕ್ಟ್ಗಳ ಪ್ರಕಾರ, ತಮ್ಮ ಅಧಿಕಾರಕ್ಕೆ ಪೊಳಪಟ್ಟ ಜುರ್ಮಾನೆ ಮೊಲಕವಾಗಿ ಮಾತ್ರವೇ ದಂಡಿಸಲ್ಪಡತಕ್ಕ ತಕಸೀರುಗಳನ್ನು ದರಿಯಾಫ್ತು ಮಾಡತಕ್ಕ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 91. ತಾರೀಖು 14ನೇ ಜೂ೯ 1876.

ಅಮಲ್‌ದಾರ್ರ ಗಳಿಗಾಗಿ ಯೇರ್ಪಟ್ಟಿರುವ ಸಾಲಿಯಾನಾ ಪರೀಕ್ಷೆಯೂ ಪ್ರತಿ ಡಿವೀಜ೯ ಹೆಡ್ ಕ್ವಾರ್ಟರ್‌ನಲ್ಲಿ ಬರುವ ಆಗಷ್ಟು ಮಾಹೆ 28 ವ 29ನೇ ತಾರೀಖು ಗಳಲ್ಲಿ ನಡಿಸಲ್ಪಡುವದು.

ಯಾರ ಹೆಸರುಗಳು ಮಂಜೂರ್ಮಾಡಲ್ಪಟ್ಟು ಡಿವೀಜ೯ ಕಮ್ಮಿಷನರ್‌ಗಳಿಗೆ ತಿಳಿಸಲ್ಪಟ್ಟಿರುತ್ತೋ ಅಂತಾ ಉಮೇದವಾರರು ಸದರೀ ಪರಿಕ್ಷೆಗೆ ಹಾಜರಾಗತಕ್ಕದ್ದೆಂದು ಎಚ್ಚರಿಸಿದೆ.

ನಂ. 92. ತಾರೀಖು 14ನೇ ಜೂ೯ 1876.

1ನೇ ಕ್ಲಾಸ್ ಮಾಜಿಸ್ಟ್ರೇಟ್ ಮೆ॥ ಪೂರ್ಣಯ್ಯ ಬಿ. ಎ. ಯವರು, 1854ನೇ ಇಸವಿಯ 18ನೇ ನಂಬರ್ ಮತ್ತು 1871ನೇ ಇಸವಿಯ 25ನೇ ನಂಬರ್ ರೇಲ್‌ವೇ ಆಕ್ಟುಗಳನುಸರಿಸಿ ತಮ್ಮ ಅಧಿಕಾರಕ್ಕೊಳಪಡತಕ್ಕ ಮತ್ತು ಜುರ್ಮಾನೆ ನೀಡೀ ಮಾತ್ರ ದಂಡಿಸಲ್ಪಡತಕ್ಕಂತಾ ತಕಸೀರ್‌ಗಳನ್ನು ವಿಚಾರಣೆ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ ಮತ್ತು ತಕಸೀರ್‌ಗಳ ಫಿರ್ಯಾದ್‌ಗಳನ್ನು ದಾಖಲ್‌ಮಾಡಿಕೊಳ್ಳಲಿಕ್ಕೂ, ತಮ್ಮಿಂದ ವಿಚಾರಿಸಲ್ಪಡಬಹುದಾದ ಮತ್ತು ಕೋಲಾರ ಡಿ॥ ಬೈಕಿ ಕೋಲಾರ, ಬೇತಮಂಗಲ, ಶ್ರೀನಿವಾಸಪುರ, ಮುಳಬಾಗಲು, ಮಾಲೂರು ತಾಲ್ಲೂಕುಗಳಲ್ಲಿ ಹುಟ್ಟುವ ಮೊಕದ್ದಮೆಗಳಲ್ಲಿ "ಪೊಲೀಸ್‌ರಿಪೋರ್ಟ್" ತೆಗದುಕೊಳ್ಳಲಿಕ್ಕೂ, 1872ನೇ ಇಸವಿಯ 10ನೇ ಆಕ್ಟಿನ 27ನೇ ಸೆಕ್ಷನ್ 3 (a) ಕ್ಲಾಜ್‌ನಲ್ಲಿ ಕಂಡ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 93. ತಾರೀಖು 14ನೇ ಜೂ೯ 1876.

ನಗರ ಡಿವೀಜ೯ ಆಫಿಷಿಯೇಟಿಂಗ್ ಸಿವಿಲ್ ಸರ್ಜ್ಜನ್ ಡಾಕ್ಟರ್ ಜೆ೯ಸ್ ಸಾಹೆಬರಿಗೆ 1876ನೇ ಇಸವಿ ಮೇ 16ನೇ ಮಕ್ತುಂ 54ನೇ ನಂಬರ್ ಬಾಬತು ಈ ಆಫಿಸ್ ಇಸ್ತಿಹಾರ್ ಪ್ರಕಾರ ಕೊಡಲ್ಪಟ್ಟ ಒಂದು ತಿಂಗಳ ರಜಾ ತಿವಾಯಿ ಜಾಸ್ತೀಯಾಗಿ 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದೆ.

ನಂ. 94. ತಾರೀಖು 14ನೇ ಜೂ೯ 1876.

ವಿಧಿಸಲ್ಪಟ್ಟ ಪರಿಕ್ಷೆಗಳನ್ನು ಯಿದುವರಿಗೆ ಕೊಡದೆ ಯಿರುವ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಜುಡಿಷಲ್ ಕಮ್ಮಿಷನರವರ ಆಫಿಸ್‌ನಲ್ಲಿ, ಯಿದರಡಿ ವಿವರಿಸಿ ಯಿರುವ ತಾರೀಖು ಗಳೊಳಗೂ, ವಿಷಯಗಳಲ್ಲಿಯೂ ಪರೀಕ್ಷಿಸಲ್ಪಡುವರು.

ಕೀಳ್ಪಟ್ಟ ವಿಷಯಗಳು.

1876ನೇ ಆಗಸ್ಟು 28ನೇ ಸೋಮವಾರ	1 ಸಿವಿಲ್ ಪ್ರೊಸೀಜ್ಯೂರ್ 2 ಸಾಕ್ಷಿ ವಿಷಯ ಕಾನೂ೯
1876ನೇ ಆಗಸ್ಟು 29ನೇ ಮಂಗಳವಾರ	1 ಇಂಡ್ಯೂ೯ ಪೆನಲ್‌ಕೋಡ್ 2 ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್
1876ನೇ ಆಗಷ್ಟು 30ನೇ ಬುಧವಾರ	ರೆವಿನ್ಯೂ ವ ಫಿನಾ೯ಷಿಯಲ್ ವಿಷಯಗಳು

ಮೇಲ್ಪಟ್ಟ ವಿಷಯಗಳು.

1876ನೇ ಆಗಸ್ಟು 28ನೇ ಮಕ್ತುಂ ಸೋಮವಾರ	1 ಜಾಯಿಸ್ ಪ್ರೊಡ್ಯೂಸ್ ವ ಲಿಮಿಟೇಷನ್ ಆಕ್ಟು 2 ರಿಜಿಸ್ಟ್ರೇಷನ್ ಆಕ್ಟು
1876ನೇ ಆಗಸ್ಟು 29ನೇ ಮಕ್ತುಂ ಮಂಗಳವಾರ	1 ಪೆನಲ್ ಕೋಡ್ ಮೆಯ್ಡಿಸ್ ಕಾವೆಂಟೇರೀಸ್ 2 ಹಿಂದೂ ವ ಮುಹಮ್ಮದೀಯರ್ ಲಾಗಳು

ನಂ. 95. ತಾರೀಖು 14ನೇ ಜೂ೯ 18 76.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಮುಸಿಪೆಗಳಿಗಾಗಿ ಬಂದು ಪರಿಕ್ಷೆಯು, ಇದರಡಿ ಕಾಣಿಸಲ್ಪಟ್ಟ ವಿಷಯಗಳನ್ನು ಆರೀತಿಯಾಗಿ 1876ನೇ ಆಗಸ್ಟು 28ನೇ ಸೋಮವಾರದಲ್ಲೂ ಆ ಮೂರನೇ, ಮೂರನೇದಿನಗಳಲ್ಲೂ ನಡೆ

1876ನೇ ಆಗಸ್ಟ್ 28ನೇ ಮುಕ್ತಂ ಸೋಮವಾರ. { 1 ಸಿವಿಲ್ ಪ್ರೊಸೀಜ್ಯೂರ್ ವ ಸಿವಿಲ್ ರೂಲ್ಸ್ ಆವ್ ಪ್ರಾಕ್ಟಿಸ್. 2 ಸಾಕ್ಷ್ಯ ಕಾನೂನು.

1876ನೇ ಆಗಸ್ಟ್ 29ನೇ ಮುಕ್ತಂ ಮಂಗಳವಾರ. { 1 ಕಂಟ್ರಾಕ್ಟುಲಾ. 2 ಈ ಕ್ವೆಟ್ ಜಾರಿಸ್ ಪ್ರೂಡೆನ್ಸ್ ಮತ್ತು ಲಾ ಆವ್ ಟಾರ್ಟ್ಸ್.

1876ನೇ ಆಗಸ್ಟ್ 30ನೇ ಮುಕ್ತಂ ಬುಧವಾರ. { 1 ಹಿಂದೂಲಾ. 2 ಮಹಮದರ್ಲಾ.

ನಗರಡಿವೀರ್ಜನಲ್ಲಿ ಇದುವರಿಗೆ ಪರೀಕ್ಷೆ ಕೊಡದೆ ಇರುವ ಮ್ಯುನಿಸಿಪ್‌ಗಳು, ಮೊಕರರ್ ಆದ ದಿನಗಳಲ್ಲಿ ನಗರ ಡಿವಿಜ್ಞ ಕಮ್ಮಿಷನರಲ್ಲಿ ಹಾಜರಾಗತಕ್ಕದ್ದು. ಮಿಕ್ಕ ದರೋಬಸ್ತು ಉಮೇದ್‌ವಾರರು ಜುಡಿಷಲ್ ಕಮ್ಮಿಷನರವರ ಕಚ್ಚೇರಿಯಲ್ಲಿ ಬರುವ ಆಗಸ್ಟ್ 28ನೇ ತಾರೀಖಿನಲ್ಲಿಯೂ ಆ ಮೂರನೇ ದಿನಗಳಲ್ಲೂ ಹಾಜರಾಗತಕ್ಕದ್ದು.

(ಡಿಸ್ಟ್ರಿಕ್ಟ್ ಫಂಡ್.)

ನಂ. 96. ತಾರೀಖು 14ನೇ ಜೂನ್ 1876.

ಚಿತ್ರದುರ್ಗ ಡಿಸ್ಟ್ರಿಕ್ಟ್ ಲೋಕಲ್ ಫಂಡ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ನಾಗವಾಕರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 6 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 97. ತಾರೀಖು 14ನೇ ಜೂನ್ 1876.

ಕೋಲಾರ ಡಿಸ್ಟ್ರಿಕ್ಟ್ ಗುಮ್ಮನಾಯಕನಪಾಳ್ಯ ತಾಲ್ಲೂಕು ಹಂಗಾಮೀ ಮುತ್ಸದ್ದಿ ಹನುಮಂತರಾಯರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ನಂ. 11. ತಾರೀಖು 12ನೇ ಜೂನ್ 1876.

4ನೇ ಗ್ರೇಡ್ ಅಕ್ಕೌಂಟೆಂಟ್ ಮುನಿಸಾಮಿ ಮೊದಲಿಯಾರ್ರು ಕಳೆದ ಏಪ್ರಿಲ್ 17ನೇ ಮುಕ್ತಂನಲ್ಲಿ, ಮೈಸೂರು ಪಬ್ಲಿಕ್ ವರ್ಕ್ಸ್ ಅಕ್ಕೌಂಟ್ಸ್ ಎಗ್ಜಾಮಿನರ್ ಯವರ ಆಫೀಸಿಗೆ ಹಾಜರಾದ ಸಬಬ್ ಅವರ ಫರ್‌ಲೋ ಪೈಕಿ ಉಪಯೋಗಿಸಿಕ್ಕೊಳ್ಳದೆ ಉಳಿದ ಭಾಗವು ಅಂದರೆ 4 ತಿಂಗಳು 19 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

W. R. JOHNSON, *Lieut.-Col.*,
Offg. Secretary, P. W. D.

ನಂ. 12. ತಾರೀಖು 12ನೇ ಜೂನ್ 1876.

ಮೈಸೂರು ಡಿವೀರ್ಜ ರೋಡ್ ಓವರ್‌ಸಿಯರ್ ಮೆಸ್ಟರ್ ಪರ್ಯೆರಾಯರವರು ಮಾಹೇ ಮಜಕೂರ್ 2ನೇ ಮುಕ್ತಂನಲ್ಲಿ ಕೆಲಸದಮೇಲೆ ಹಾಜರಾದ್ದರಿಂದ 1876ನೇ ಮೇ 17ನೇ ಮುಕ್ತಂ 6ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕಿ ಉಪಯೋಗಿಸಿಕ್ಕೊಳ್ಳದೆ ಉಳಿದ ಭಾಗವು ಅವರ ಖಾಯಿಷ್ ಹೇ.ರಿಗೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 13. ತಾರೀಖು 12ನೇ ಜೂನ್ 1876.

ಶಿವಮೊಗ್ಗ ಡಿವೀರ್ಜ ಸಬ್ ಓವರ್‌ಸಿಯರ್ ಮ|| ಮೆಕ್ ಇಂಟೈರ್ ಯವರಿಗೆ ಕಳೆದ ಮಾರ್ಚೀ 8ನೇ ಮುಕ್ತಂ ಲಾಗಾಯತ್ತು ಸಿವ್ ಕೋಡ್ 1ನೇ ರೂಲ್ 9ನೇ ಸೆಕ್ಷನ್ ಸಪ್ಲಮೆಂಟ್ ಪ್ರ. ಅನುಸರಿಸಿ ಆರು ತಿಂಗಳ ಜಾಸ್ತೀ ಸಿಕ್ ರಜಾ ಕೊಡಲ್ಪಟ್ಟಿತ್ತು

"ಬಮೋಜೀಬ್ ಹುಕ್ಕುಂ,"

C. BOWEN, *Capt.*, R. E.,
Offg. Under-Secy., R. & B. Branch.